**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ:-ಸಿ1(4) ಸಾ.ವರ್ಗಾವಣೆ-30/2015-16 ದಿನಾಂಕ : 07-08-2015

**ಪ್ರಕಟಣೆ**

ವಿಷಯ : 2015-16ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ ಇಡಿ 19 ಇಟಿಆರ್ 2015 (ಭಾಗ-1) ದಿನಾಂಕ: 24-06-2015.

2. ಈ ಕಛೇರಿ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ 27-06-2015.

~~~

ದಿನಾಂಕ 10-08-2015 ಮತ್ತು 11-08-2015ರಂದು ನಿಗಧಿಪಡಿಸಲಾದ 2015-16ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಘಟಕದೊಳಗಿನ ಕೋರಿಕೆ ವರ್ಗಾವಣೆಯ ಕೌನ್ಸಿಲಿಂಗ್ ದಿನಾಂಕವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಮುಂದೂಡಿ ಈ ಕೆಳಕಂಡಂತೆ ಮರುನಿಗಧಿಪಡಿಸಿದೆ.

1. ಬೆಂಗಳೂರು ಮತ್ತು ಮೈಸೂರು ಆಯುಕ್ತಾಲಯದ ಘಟಕದೊಳಗಿನ ಕೋರಿಕೆ **(Within Unit - Request)** ವರ್ಗಾವಣೆಯನ್ನು ದಿನಾಂಕ 12-08-2015 ಮತ್ತು 13-08-2015ರಂದು ಬೆಳಿಗ್ಗೆ 10-30 ರಿಂದ ನಡೆಸಲಾಗುತ್ತದೆ.

2. ಆದ್ಯತಾ ಪಟ್ಟಿಯ ಕ್ರಮ ಸಂಖ್ಯೆ 01 ರಿಂದ 200 ರವರೆಗೆ ದಿನಾಂಕ 12-08-2015 ರಂದು ಮತ್ತು ಕ್ರಮ ಸಂಖ್ಯೆ 201 ರಿಂದ 415 ರವರೆಗೆ ದಿನಾಂಕ 13-08-2015ರಂದು ನಡೆಸಲಾಗುವುದು.

3. ಘಟಕದ ಹೊರಗಿನ **(Out of Unit - Request)** ವರ್ಗಾವಣೆಯನ್ನು ಈ ಹಿಂದೆ ನಿಗಧಿಪಡಿಸಿರುವಂತೆ ದಿನಾಂಕ 14-08-2015ರಂದು ನಡೆಸಲಾಗುವುದು.

4. ಕೌನ್ಸಿಲಿಂಗ್ ನಡೆಯುವ ಸ್ಥಳ : **ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಕಾವೇರಿ ಭವನದ ಎದುರು, ಬೆಂಗಳೂರು.**

7/8/15

**(ಕೆ.ಎಸ್.ಸತ್ಯಮೂರ್ತಿ)**

**ಆಯುಕ್ತರು.**
~~~